# ಒಂದು ಕಾಗದದ ಚೂರು ಮತ್ತು ವಿವೇಕಾನಂದ ಜನ್ಮಶತಾಬ್ದಿ

## (ಒಂದು ಹಳೆಯ ನೆನಪು )

ಲಕ್ಷ್ಮೀನಾರಾಯಣ ಅಡೇಖಂಡಿ

ಭಾಗ ೨

''ಲಾಸ್ಟ್ ಡೇಟ್ ಆಗಲೇ ಆಗಿಹೋಗಿದೆ. ಆದರೂ ಇವತ್ತು ಸಾಯಂಕಾಲದೊಳಗೆ ಯಾರಾದರೂ ಪ್ರಬಂಧ ಬರೆದು ಕೊಡೋದಿದ್ರೆ ಕೊಡಬಹುದು'' ಅಂತ ಒಂದು ಅನೌನ್ಸ್‌ಮೆಂಟ್ ಮಾಡಿಸಿದರು. ದೇವರ ದಯದಿಂದ ಯಾರೂ ಬರೆಯಲು ಮುಂದೆ ಬರಲಿಲ್ಲ. ಹಾಗಾಗಿ ಹೆಡ್‌ಮಾಸ್ಟರು ನನ್ನ ಪ್ರಬಂಧವನ್ನೇ ಮೈಸೂರು ರಾಮಕೃಷ್ಣಾಶ್ರಮಕ್ಕೆ ಕಳುಹಿಸಿಕೊಟ್ಟರು.

ಮರುದಿನದಿಂದಲೇ ರಾಮಕೃಷ್ಣಾಶ್ರಮದಿಂದ ಏನಾದರೂ ಕಾಗದ ಬಂದೀತೆ? ಎಂದು ಹೈಸ್ಕೂಲಿಗೆ ಬರುವ ಪೋಸ್ಟ್‌ಮ್ಯಾನ್‌ಗಾಗಿ, ಆತಂಕದಿಂದ ಕಾಯತೊಡಗಿದೆ. ಸ್ಪರ್ಧೆಯಲ್ಲಿನ ಬಹುಮಾನಕ್ಕಿಂತ ಹೆಚ್ಚಾಗಿ ಮೈಸೂರಿನ ಪ್ರವಾಸದ ಆಸೆ ನನ್ನಲ್ಲಿ ಪ್ರಬಲವಾಗಿತ್ತು. ಒಂದು ಮನೆಯೇ ಒಂದು ಹಳ್ಳಿಯಂತಿದ್ದ ನಮ್ಮೂರಿಗೆ ಬಗ್ಗುಂಜಿ, ಉತ್ತಮೇಶ್ವರಗಳೇ ಪೇಟೆಯಾಗಿದ್ದವು. ಬಾತ್ ರೂಮಿಗೆ ಹೋಗಿಬಂದಷ್ಟೇ ಸಲೀಸಾಗಿ ವಿದೇಶಗಳಿಗೆ ಹೋಗಿ ಬರುತ್ತಿರುವ ಇಂದಿನ ಮಲೆನಾಡಿನ ವಿದ್ಯಾವಂತ ತರುಣರ ಪಾಲಿಗೆ ಕೊಪ್ಪ, ತೀರ್ಥಳ್ಳಿ, ಶೃಂಗೇರಿಗಳು ಇವತ್ತಿಗೂ ಹಳ್ಳಿಗಳಂತಿರುವಾಗ ನಮ್ಮ ಪಾಲಿಗೆ ಅವೇ ಪಟ್ಟಣಗಳಾಗಿದ್ದವು. ಹೀಗಿರುವಾಗ ಕನಸಿನ ಮೈಸೂರಿಗೆ ಹೋಗಿಬರುವ ಅಪರೂಪದ ಅವಕಾಶ ಸಿಕ್ಕಿಬಿಟ್ಟರೆ?

ನಮ್ಮ ಮಲೆನಾಡಿನಿಂದ ಮೈಸೂರಿಗೆ ಹೋಗಿ ಸಾಹಿತ್ಯ ಲೋಕದ ಉತ್ತುಂಗದಲ್ಲಿದ್ದ ಕುವೆಂಪು ಅವರಿರುವ ಊರು ಮೈಸೂರು. ಕಾದಂಬರಿ ಓದುವ ಖಾಯಮ್ ಗೀಳಿಗೆ ಸಿಕ್ಕುವಷ್ಟು ಸೊಗಸಾಗಿ ಕೃತಿಗಳನ್ನು ರಚಿಸಿದ ತ್ರಿವೇಣಿಯವರ ಊರು ಮೈಸೂರು. ಅವರ ಬರಹಗಳಲ್ಲಿ ವರ್ಣಿತವಾದ ಬೃಂದಾವನ ಉದ್ಯಾನ ಇರುವ ಊರು ಮೈಸೂರು. ತರುಣರ ಪಾಲಿನ ಆದರ್ಶ, ವಿವೇಕಾನಂದರ ರಾಮಕೃಷ್ಣಾಶ್ರಮ ನೋಡುವ ಅವಕಾಶವೂ ಸಿಕ್ಕರೆ ಬೇರೇನು ಬೇಕು?

ದಿನಗಳು ಕಳೆದವು; ವಾರಗಳು ಉರುಳಿದವು. ಪೋಸ್ಟ್ ಮ್ಯಾನ್ ಶಂಕರ ವಿಟ್ಠಲ ಡೋಂಗರೆಯವರಿಗೆ ನಾನು ಸ್ಪರ್ಧಿಸಿದ್ದ ವಿಚಾರ ತಿಳಿಸಿದ್ದೆ. ನನ್ನ ಮೇಲಿನ ಹೊಟ್ಟೆಕಿಚ್ಚಿಗೆ ಅವರೇ ಏನಾದರೂ ಪಿತೂರಿ ಮಾಡಿರಬಹುದೇ ಎಂಬ ಅನುಮಾನವೂ ಕಾಡದಿರಲಿಲ್ಲ! ತಿಂಗಳು ಎರಡು ತಿಂಗಳು ಕಳೆದರೂ ರಾಮಕೃಷ್ಣಾಶ್ರಮದಿಂದ ಯಾವುದೇ ಪತ್ರ ಬರದಿದ್ದಾಗ, 'ಇಲ್ಲಿಗೀ ಕಥೆ ಮುಗಿಯಿತು' ಎಂದು ಮೈಸೂರಿನ ಕನಸು ಕಾಣುವುದನ್ನು ಬಿಟ್ಟೆ.

ಈ ಸ್ಪರ್ಧೆಯಿಂದಾಗಿ ಒಂದು ಸಂಕಟವೂ ಶುರುವಾಗಿತ್ತು. ಹೆಡ್ಮಾಸ್ಟರು ನಮಗೆ ಗಣಿತದ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಹೋಮ್‌ವರ್ಕ್‌ನಲ್ಲಿ ನಾನು ಏನಾದರೂ ತಪ್ಪು ಮಾಡಿದರೆ, ''ನೋಡಪ್ಪಾ ಇದು ಮ್ಯಾಥಮ್ಯಾಟಿಕ್ಸ್. ಓದಿ ಬರ್ದು ಪ್ರಾಬ್ಲಂ ಸಾಲ್ವ್ ಮಾಡಿ ಅಭ್ಯಾಸ ಮಾಡಬೇಕು... ಸ್ನೇಹಿತರ ಜೊತೆ ಹರಟೆ ಹೊಡಕೊಂಡು ಕನ್ನಡದಾಗೆ ಪ್ರಬಂಧ ಬರೆದ ಹಾಗಲ್ಲ'' ಎಂದು ಛೇಡಿಸತೊಡಗಿದರು.

ಹೀಗಿರುವಾಗ ಒಂದು ದಿನ. . .

ತರಗತಿಯಲ್ಲಿ ಪಾಠ ನಡೆಯುತ್ತಿದ್ದಾಗ ಹೆಡ್ಮಾಸ್ಟರಿಂದ, ತಕ್ಷಣ ಬರಬೇಕೆಂದು ಕರೆಬಂತು. ಸಾಧಾರಣವಾಗಿ ವಿದ್ಯಾರ್ಥಿಗಳು ಏನಾದರೂ ತಪ್ಪುಮಾಡಿದರೆ ಹೀಗೆ ಬುಲಾವ್ ಬರುವುದು ಮಾಮೂಲು. ಸಹಪಾಠಿಗಳು ನನ್ನನ್ನು ಕರುಣೆಯಿಂದ ನೋಡಿದರು.

ಆಫೀಸಿಗೆ ಹೋದೆ. 'ದೀನ ನಾನು ಸಮಸ್ತ ಲೋಕಕೆ' ಅನ್ನುವಂತೆ ವಿನೀತನಾಗಿ ನಿಂತೆ.

''ಪ್ರಬಂಧ ಸ್ಪರ್ಧೇಲಿ ನೀನು ಸೆಲೆಕ್ಟ್ ಆಗಿದೀಯಂತಪ್ಪಾ. ಮುಂದಿನವಾರ ಮೈಸೂರಿಗೆ ಹೋಗಬೇಕಂತೆ''. ರೋಮಾಂಚನಗೊಂಡು ನಿಂತೆ. ಆಗೆಲ್ಲಾ 'ಥ್ಯಾಂಕ್ ಯು ಸರ್' ಅಂದೇನೂ ಅನ್ನುವ ಅಭ್ಯಾಸವಿರಲಿಲ್ಲ. ''ಹೋಗೋ ಖರ್ಚಿಗೆ ಏನು ಮಾಡ್ತಿ?'' ಅಂದರು. ''ಹೋಗಿಬರೋ ಖರ್ಚೆಲ್ಲಾ ಅವರೇ ಹಾಕ್ಕೊತ್ತಾರಂತಲ್ಲ ಸರ್'' ಅಂದೆ.

''ಅದು ನಿಜಾನಯ್ಯ, ಅಲ್ಲಿಗೆ ಹೋದಮ್ಯಾಲೆ ಕೊಡ್ತಾರೆ. ಆದರೆ ಅಲ್ಲಿಗೆ ಹೋಗೋಕು ದುಡ್ಡು ಬೇಕಲ್ಲಪ್ಪಾ''

ನನ್ನ ಬಳಿ ಉತ್ತರವಿರಲಿಲ್ಲ; ಯಾಕೆಂದರೆ ನನ್ನ ಬಳಿ ದುಡ್ಡೂ ಇರಲಿಲ್ಲ.

''ಬಸ್ಸಲ್ಲಿ ಮೈಸೂರಿಗೆ ಹೋಗ್ಬೇಕು. ಬಸ್‌ಸ್ಟ್ಯಾಂಡಿಂದ ಆಶ್ರಮಕ್ಕೆ ಕುದುರೆಗಾಡೀಲಿ ಹೋಗ್ಬೇಕು. ಅದಕ್ಕಾಗುವಷ್ಟು ದುಡ್ಡು ನಾನು ಕೊಟ್ಟಿರ್ತೀನಿ. ಬಂದ್ಮ್ಯಾಲೆ ಕೊಡು'' ಎಂದು ಹೊರೆಯಿಂದ ನನ್ನನ್ನು ಪಾರುಮಾಡಿದರು.

ಮೈಸೂರು ರಾಮಕೃಷ್ಣಾಶ್ರಮದ ವಿದ್ಯಾರ್ಥಿ ನಿಲಯ ತಲುಪಿದಾಗ ಸಂಜೆಯಾಗಿತ್ತು. ಆಗಲೇ ಹತ್ತೊಂಬತ್ತು ಜಿಲ್ಲೆಗಳಿಂದ ಬಂದ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ನಮಗೆ ಏರ್ಪಾಡು ಮಾಡಿದ ವಸತಿ ಜಾಗಕ್ಕೆ ಕರೆದುಕೊಂಡು ಹೋದರು. ನಾವು ಊರಿಂದ ಮೈಸೂರು ತಲುಪಿದಾಗ ಅಲ್ಲಿ ವಿದ್ಯಾರ್ಥಿಗಳು ಬಂದು ಸೇರಿದ್ದರು. ಕಿರಿಯ ಸಂನ್ಯಾಸಿಗಳ ನೇತೃತ್ವದಲ್ಲಿ, ಮರಳಿ ಹೋಗಲು ಪ್ರಯಾಣ ವೆಚ್ಚದ ವಿವರಗಳನ್ನು ದಾಖಲೆ ಮಾಡಿಕೊಂಡರು. ದೊಡ್ಡ ಊಟದಹಾಲಿಗೆ ಕರೆದುಕೊಂಡು ಹೋಗಿ, ಬಿಸಿಬಿಸಿ ಖಾಲಿದೋಸೆ, ಚಟ್ನಿಗಳನ್ನು ಧಾರಾಳವಾಗಿ ಬಡಿಸಿದರು. ಏಳು ಗಂಟೆಯ ಹೊತ್ತಿಗೆ ರಾಮಕೃಷ್ಣಾಶ್ರಮಕ್ಕೆ ಕರೆದುಕೊಂಡು ಹೋದರು. ಪರಮಹಂಸರು, ಶಾರದಾದೇವಿ, ವಿವೇಕಾನಂದರ ಪ್ರತಿಕೃತಿಯ ಮುಂದೆ ಬಂಗಾಳಿ ಶೈಲಿಯ ಭಜನೆಯಲ್ಲಿ ಪಾಲ್ಗೊಂಡೆವು. ಅದಕ್ಕಿಂತ ಹೆಚ್ಚಾಗಿ, ಗೀತಾಭಾವಧಾರೆ, ಉಪನಿಷತ್ ಭಾವಧಾರೆ, ಗುರುದೇವ ರಾಮಕೃಷ್ಣ, ವಿವೇಕಾನಂದರ ಜೀವನಚರಿತ್ರೆ ಮುಂತಾಗಿ ಹಲವಾರು ಮೌಲಿಕ ಕೃತಿಗಳ ರಚನಕಾರರಾದ ಸ್ವಾಮಿ ಸೋಮನಾಥಾನಂದ ಅವರೊಡನೆ, ಜೊತೆಗೆ, ಆಗ ರಾಮಕೃಷ್ಣಾಶ್ರಮದ ಅಧ್ಯಕ್ಷರಾಗಿದ್ದ ಸ್ವಾಮಿ ಶಾಂಭವಾನಂದರೊಡನೆ ಒಂದಿಷ್ಟು ಪ್ರಶ್ನೋತ್ತರಕ್ಕೆ ಅವಕಾಶ ದೊರೆತದ್ದು ಮನಸ್ಸಿಗೆ ಹೆಚ್ಚಿನ ಮುದ ನೀಡಿತು.

ಮುಂದಿನ ದಿನಗಳಲ್ಲಿ ಎಲ್ಲಾ ಸ್ಪರ್ಧಿಗಳನ್ನೂ ಬಸ್ಸಿನಲ್ಲಿ ಚಾಮುಂಡಿ ಬೆಟ್ಟ ನಂಜನಗೂಡು, ಮೈಸೂರು ಅರಮನೆ, ಲಲಿತ ಮಹಲ್, ಪ್ರಾಣಿ ಸಂಗ್ರಹಾಲಯ, ಶ್ರೀರಂಗಪಟ್ಟಣ ಮುಂತಾದ ಪ್ರೇಕ್ಷಣೀಯ ಸ್ಥಳಗಳಿಗೆ ಕರೆದುಕೊಂಡು ಹೋದರು.

ಒಂದು ಸಂಜೆ ಆರುಗಂಟೆಯ ಹೊತ್ತಿಗೆ ಬೃಂದಾವನಕ್ಕೆ ಹೋದೆವು. ಮತ್ತೊಂದು ಗಂಟೆಯಲ್ಲಿ ಒಮ್ಮೆಲೆ ಸರ್ವವ್ಯಾಪಿಯಾಗಿ ನೂರಾರು ಬಣ್ಣದ ದೀಪಗಳು ಪ್ರಜ್ವಲಿಸಿದವು! ವರ್ಣರಂಜಿತ ಕಾರಂಜಿಗಳು ಮುಗಿಲೆತ್ತರಕ್ಕೆ ಚಿಮ್ಮಿದವು. ಜೀವಮಾನದಲ್ಲಿ ಮೊಟ್ಟಮೊದಲಬಾರಿಗೆ ಕಂಡ ಅಂಥದೊಂದು ಪರ್ಯಾವರಣ, ನಾನು ಗಂಧರ್ವಲೋಕದಲ್ಲಿದ್ದೇನೋ ಎಂಬಂತೆ ಭ್ರಮೆಯಲ್ಲಿ ತೇಲಿಸಿತು.

ಕೊನೆಯ ದಿನ ಮಧ್ಯಾಹ್ನದ ನಂತರ, ಕೇಂದ್ರ ಸರ್ಕಾರದ ಹಣಕಾಸು ಮಂತ್ರಿಗಳ ಅಧ್ಯಕ್ಷತೆಯಲ್ಲಿ ಜನ್ಮಶತಾಬ್ದಿ ಸಮಾರಂಭದ ಸಭಾ ಕಾರ್ಯಕ್ರಮ. ನಾವೆಲ್ಲರೂ ಕಾತರದಿಂದ ಕಾಯುತ್ತಿದ್ದ ಕುವೆಂಪು– ರಾಷ್ಟ್ರಕವಿ, ಪದ್ಮಭೂಷಣ ಡಾ. ಕೆ ವಿ ಪುಟ್ಟಪ್ಪನವರು ಭಾಗವಹಿಸುವವರಿದ್ದರು. ಕುವೆಂಪು ಅವರು ರಾಮಕೃಷ್ಣಾಶ್ರಮದಲ್ಲಿ ಇದ್ದು ಓದಿದವರು. ಆಶ್ರಮದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ಸಿದ್ಧೇಶ್ವರಾನಂದರಿಂದ ಮಾರ್ಗದರ್ಶನ ಪಡೆದವರು.

**''ಭರತ ಖಂಡದ ನೀಲ ಗಗನವ ತಿಮಿರ ಮುಸುಗಿರಲು**
**ಭಾರತೀಯರು ತಮ್ಮ ಧ್ಯೇಯವ ಮರೆತು ಮಲಗಿರಲು**
**ಪರಮಹಂಸನೆ ಉದಯಸೂರ್ಯನ ತೆರದಿ ರಂಜಿಸಿದೆ''**

ಎಂದೂ,

**''ಶ್ರೀ ವಿವೇಕಾನಂದ ಗುರುವರ ನವಯುಗಾಚಾರ್ಯ**
**ರಾಮಕೃಷ್ಣರ ಭೀಮ ಶಿಷ್ಯನೆ ವೀರ ವೇದಾಂತಿ''**

ಎಂದೂ ಅವರು ಬರೆದ ಕಾವ್ಯದ ಸಾಲುಗಳನ್ನು ಮರೆಯುವುದುಂಟೆ?

ಬೆಳಗಿನ ಉಪಾಹಾರದ ನಂತರ, ಪ್ರಬಂಧ ಸ್ಪರ್ಧೆಗೆ ಸಂಬಂಧಪಟ್ಟಂತೆ, ಮತ್ತೊಂದು ಲಿಖಿತ ಪರೀಕ್ಷೆ ಇತ್ತು. ನೂರು ಅಂಕಗಳ ಪ್ರಶ್ನೆಪತ್ರಿಕೆ. ಪ್ರತಿ ಪ್ರಶ್ನೆಗೆ ಒಂದು, ಎರಡು ಅಂಕಗಳಿದ್ದವು.

ವಿವೇಕಾನಂದರ ಜೀವನಕ್ಕೆ ಸಂಬಂಧಿಸಿದ್ದಲ್ಲದೇ ನಮ್ಮ ಅಂತರಂಗವನ್ನೂ ಪರೀಕ್ಷೆಗೆ ಒಡ್ಡುವಂತಹ ಹಲವಾರು ಪ್ರಶ್ನೆಗಳೂ ಇದ್ದವು. ಒಂದು ಪ್ರಶ್ನೆ ಇವತ್ತಿಗೂ ನೆನಪಿದೆ:

ಎಂಟು ಜನ ಮಕ್ಕಳಿದ್ದ ಸಂಸಾರದಲ್ಲಿ, ತಂದೆ ತೀರಿಕೊಂಡು ಕುಟುಂಬ ಆರ್ಥಿಕ ಸಂಕಟಕ್ಕೀಡಾದ ಸಂದರ್ಭದಲ್ಲಿ ವಿವೇಕಾನಂದರು ಸಂನ್ಯಾಸ ಸ್ವೀಕರಿಸಿದ ಬಗ್ಗೆ ನಿಮ್ಮ ಅಭಿಪ್ರಾಯ

೧) ಸರಿ

೨) ತಪ್ಪು

೩) ಸಂಸಾರ ನಿರ್ವಹಣೆಗೆ ಏರ್ಪಾಡುಮಾಡಿ ನಂತರ ಸಂನ್ಯಾಸಿಯಾಗಬೇಕಿತ್ತು.

೪) ಗೊತ್ತಿಲ್ಲ

ಈ ಪರೀಕ್ಷೆಯಲ್ಲಿ ನಾವು ಗಳಿಸಿದ ಅಂಕಗಳು ಮತ್ತು ನಮ್ಮ ಪ್ರಬಂಧ ಇವೆರಡರ ಆಧಾರದ ಮೇಲೆ ಅಂತಿಮ ಸುತ್ತಿನ ಫಲಿತಾಂಶವನ್ನು ಮಧ್ಯಾಹ್ನ ಎರಡುಗಂಟೆಗೆ ಪ್ರಕಟಿಸುವುದಾಗಿ ತಿಳಿಸಿದರು. ಸ್ಪರ್ಧೆಯಲ್ಲಿ ಭಾಗವಹಿಸಿದ ನನ್ನ ಮೂಲ ಉದ್ದೇಶ ಈಗಾಗಲೇ ಈಡೇರಿದ್ದರಿಂದ ಬಹುಮಾನ ಬಾರದಿದ್ದರೂ ನನಗೆ ಅಂತಹ ನಿರಾಶೆಯೇನೂ ಆಗುವಂತಿರಲಿಲ್ಲ. ಅಲ್ಲದೆ ಜಿಲ್ಲೆಯಿಂದ ಆಯ್ಕೆಯಾದ ಎಲ್ಲಾ ಸ್ಪರ್ಧಿಗಳಿಗೂ ಕೆಲವು ಪುಸ್ತಕ, ವಿವೇಕಾನಂದರ ಚಿಕ್ಕ ಫೋಟೋ ಮತ್ತು ಸರ್ಟಿಫಿಕೇಟ್ ಅಂತೂ ಗ್ಯಾರಂಟಿಯಾಗಿತ್ತು.

''ಎಲ್ಲ ಸ್ಪರ್ಧಿಗಳ ಪರವಾಗಿ ಯಾರಾದರೂ ಒಬ್ಬರಿಗೆ ಸಭೆಯಲ್ಲಿ ಐದು ನಿಮಿಷ ಮಾತಾಡುವ ಅವಕಾಶ ಇದೆ. ನಿಮ್ಮಲ್ಲಿ ಯಾರು ಮುಂದೆಬರುತ್ತೀರಿ ತಿಳಿಸಿ'' ಎಂದರು. ಒಂದಿಬ್ಬರು ಅನುಮಾನಿಸಿ ಎದ್ದು ನಿಂತರು. ಒಬ್ಬ ಸ್ಪರ್ಧಿ ಮಾತ್ರ ತಾನು ಮಾತಾಡುವುದಾಗಿಯೂ, ಖಂಡಿತ ಅವಕಾಶ ಮಾಡಿಕೊಡಬೇಕೆಂದೂ ಕೇಳಿದರು. ಕಳೆದ ಮೂರು ದಿನಗಳಲ್ಲಿಯೂ ಅವರು ಎಲ್ಲರಿಗಿಂತಲೂ ಹೆಚ್ಚು ಮಾತನಾಡುತ್ತಿದ್ದರು – ಗತ್ತಿನಿಂದ. ಮೊದಲ ಬಹುಮಾನ ತಮಗೇ ಬರಬಹುದೆಂದೂ ಪರೋಕ್ಷವಾಗಿ ಸೂಚಿಸುತ್ತಿದ್ದರು. ಅವರಿಗೇ ಮಾತಾಡುವ ಅವಕಾಶ ಸಿಕ್ಕಿತು. ಅವರು

ಮುಂದೆ ಬೆಂಗಳೂರಿನ ಪ್ರಸಿದ್ಧ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಪ್ರಸಿದ್ಧ ವಿಮರ್ಶಕರಾಗಿ ಸಾಹಿತ್ಯ ವಲಯದಲ್ಲಿ ಹೆಸರು ಮಾಡಿದರು.

ನೂರಕ್ಕೂ ಹೆಚ್ಚು ಸ್ಪರ್ಧಿಗಳಲ್ಲಿ ಪ್ರತಿಯೊಬ್ಬರಿಗೂ ಸಭಾಧ್ಯಕ್ಷರು ಬಹುಮಾನ ನೀಡುವ ಏರ್ಪಾಡು ನಡೆಯುವ ಬಗೆ ಹೇಗೆ? ಎಂದು ನಮಗೆಲ್ಲ ಕುತೂಹಲವಿತ್ತು. ಅದಕ್ಕೆ ಉತ್ತರವೆಂಬಂತೆ, ವೇದಿಕೆಯಲ್ಲಿ ಬಹುಮಾನ ಸ್ವೀಕರಿಸುವುದಕ್ಕೆ ಒಂದು ರಿಹರ್ಸಲ್ ಏರ್ಪಾಡುಮಾಡಿದರು.

ಎತ್ತರದ ವೇದಿಕೆಯ ಮುಂಭಾಗದಲ್ಲಿ ವಿವೇಕಾನಂದರ ದೊಡ್ಡ ಫೋಟೋ. ಅದರ ಮುಂದೆ ಕ್ರಮವಾಗಿ ಜೋಡಿಸಿಟ್ಟ ಬಹುಮಾನ ವಿಜೇತರ ಸರ್ಟಿಫಿಕೇಟ್‌ಗಳು, ಬಹುಮಾನ ವಿತರಣೆಯ ಘೋಷಣೆಯಾಗುತ್ತಿದ್ದಂತೆ ಸಭಾಧ್ಯಕ್ಷರು ವೇದಿಕೆಯ ಮುಂಭಾಗಕ್ಕೆ ಬಂದು ನಿಲ್ಲುತ್ತಾರೆ. ಒಮ್ಮೆಗೆ ಆರುಜನ ವಿಜೇತರು ವೇದಿಕೆಯ ಮುಂದೆ ಹೋಗಬೇಕು. ಮೊದಲಿಗೆ ವಿವೇಕಾನಂದರ ಫೋಟೋಗೆ ನಮಸ್ಕರಿಸಬೇಕು; ನಂತರ ವೇದಿಕೆಯ ಮೇಲಿರುವ ಅಧ್ಯಕ್ಷರಿಗೆ ನಮಸ್ಕರಿಸಬೇಕು. ಆಮೇಲೆ ನಮ್ಮ ಸರ್ಟಿಫಿಕೇಟ್ ತೆಗೆದುಕೊಂಡು, ತಿರುಗಿನಿಂತು ಇಡೀ ಸಭೆಗೆ ನಮಸ್ಕರಿಸಿ, ಹೊರನಡೆದು ಮುಂದಿನ ವಿಜೇತರಿಗೆ ಅವಕಾಶ ಮಾಡಿಕೊಡಬೇಕು. ರಾಜ್ಯಕ್ಕೆ ಪ್ರಥಮ ಮತ್ತು ದ್ವಿತೀಯ ಬಹುಮಾನ ಪಡೆದವರಿಗೆ ಮಾತ್ರ ವೇದಿಕೆಯ ಮೇಲೆ ಹೋಗಿ ಅಧ್ಯಕ್ಷರಿಂದ ಬಹುಮಾನ ಸ್ವೀಕರಿಸುವ ಅವಕಾಶ.

ಹೇಳಿದ ಸಮಯಕ್ಕೆ ಸರಿಯಾಗಿ ಬಹುಮಾನಿತರ ಹೆಸರಿನ ಪಟ್ಟಿ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟವಾಯಿತು. ಪರೀಕ್ಷೆಯ ರಿಸಲ್ಟ್ ನೋಡುವಷ್ಟೇ ಆತುರದಿಂದ ಎಲ್ಲರೂ ಬೋರ್ಡಿನ ಸುತ್ತ ಮುತ್ತಿಗೆ ಹಾಕಿದರು. ನಾನು, ಎಲ್ಲ ಕಡೆಯೂ ಇರುವಂತೆ ಇಲ್ಲಿಯೂ, ಹಿಂದೆ ಇದ್ದೆ.

ಆ ಸ್ನೇಹಿತರು ರಿಸಲ್ಟ್ ನೋಡಿ ನನ್ನ ಬಳಿ ಬಂದು ''ನಂಗೆ ಸೆಕೆಂಡ್ ಪ್ರೈಸ್ ಬಂದಿದೆ'' ಅಂದರು. ಅವರನ್ನು ಅಭಿನಂದಿಸಿದೆ. ''ಮೊದಲ ಬಹುಮಾನ ನಿಮಗೆ'' ಅಂದರು.

''ತಮಾಷೆ ಸಾಕು'' ಅಂದೆ.

''ನಿಜಕ್ಕೂ ನಿಜ ಕಣ್ರೀ'' ಅಂದು ನನ್ನನ್ನು ಎಳೆದುಕೊಂಡು ಬೋರ್ಡಿನ ಹತ್ತಿರ ಹೋಗಿ ತೋರಿಸಿದರು. ಅನಿರೀಕ್ಷಿತ ಬಹುಮಾನ ಗಳಿಕೆಯ ಸಂಭ್ರಮಕ್ಕೆ ಬದಲಾಗಿ, ಈ ಕ್ಷಣಕ್ಕಾಗಿ ನಾನು ಯಾರು ಯಾರಿಗೆ ಕೃತಜ್ಞನಾಗಬೇಕಾಗಿದೆ ಎಂದು ನೆನೆದೇ ಹೃದಯ ಆರ್ದ್ರವಾಯಿತು.

ಸಂಜೆ ಜನ್ಮಶತಾಬ್ದಿ ಸಮಾರಂಭ. ಅಂದವಾಗಿ ಬಾಚಿದ ಬಿಳೀ ತಲೆಕೂದಲಿನ, ಅಡಿಯಿಂದ ಮುಡಿಯವರೆಗೆ ಶುದ್ಧ ಶ್ವೇತ ವಸ್ತ್ರಧಾರಿಯಾದ, ಧೀರ ನಡಿಗೆಯ ಕುವೆಂಪು ಅವರು ಸಭಾಭವನದಲ್ಲಿ ನಡೆದುಬಂದಾಗ ಒಮ್ಮೆಲೆ ವಿದ್ಯುತ್ ಸಂಚಾರವಾದಂತಾಗಿ, ರೋಮಾಂಚಿತರಾದ ನಾವೆಲ್ಲರೂ ಎದ್ದು ನಿಂತು ನಮಸ್ಕರಿಸಿದೆವು.

ಭಾರತ ಸರ್ಕಾರದ ವಿತ್ತ ಮಂತ್ರಿಗಳು ಸಕಾಲಕ್ಕೆ ಹಾಜರಾದರು. ನಿಗದಿತ ಸಮಯಕ್ಕೆ ಸಭಾಕಾರ್ಯಕ್ರಮ ಪ್ರಾರಂಭವಾಯಿತು. ಕುವೆಂಪು ಅವರು ವೇದಿಕೆಯಿಂದ ಸಭೆಯನ್ನು, ಮುಖ್ಯವಾಗಿ ವಿದ್ಯಾರ್ಥಿಗಳಾದ ನಮ್ಮನ್ನು ಉದ್ದೇಶಿಸಿ ಸುಮಾರು ಇಪ್ಪತ್ತು ನಿಮಿಷ ಮಾತನಾಡಿದರು. ಅದಕ್ಕಿಂತ ಮೊದಲು ಅವರು ಹೇಳಿದ್ದು: ''ವೇದಿಕೆಯಲ್ಲಿ ಕಾವಿ ವಸ್ತ್ರಧಾರಿ ಇದ್ದಾರೆ; ಖಾದಿ ವಸ್ತ್ರಧಾರಿ ಇದ್ದಾರೆ. ಅವರೆಲ್ಲ ಏನೇ ಮಾತನಾಡಿದರೂ ಒಂದು ನಿರ್ದಿಷ್ಟ ಪರಿಧಿಯ ಒಳಗಿದ್ದುಕೊಂಡೇ ಮಾತನಾಡಬೇಕಾಗುತ್ತದೆ. ಆದರೆ ನಾನು ಶ್ವೇತವಸ್ತ್ರಧಾರಿ. ನನಗೆ ಯಾವ ನಿರ್ಬಂಧವೂ ಇಲ್ಲ''.

ಮೊದಲೇ ಏರ್ಪಾಡುಮಾಡಿದಂತೆ ವಿಜೇತರೆಲ್ಲರೂ ಕ್ರಮವಾಗಿ ತಮ್ಮ-ತಮ್ಮ ಸರ್ಟಿಫಿಕೇಟ್ ಪಡೆದುಕೊಂಡರು. ನವೀನ ಮಾದರಿಯ ಈ ಏರ್ಪಾಡನ್ನು ಸಭಾಧ್ಯಕ್ಷರು ತುಂಬುಹೃದಯದಿಂದ ಪ್ರಶಂಸಿಸಿದರು. ಮೊದಲೇ ತಿಳಿಸಿದಂತೆ ಇಬ್ಬರಿಗೆ ವೇದಿಕೆಯ ಮೇಲೇರಿ ಬಹುಮಾನ ಸ್ವೀಕರಿಸುವ ಅವಕಾಶವಿತ್ತು.

ಉತ್ಸಾಹದ ಗಲಿಬಿಲಿ, ಆತಂಕದಿಂದ ವೇದಿಕೆ ಏರಿದೆ. ಬಹುಮಾನ ನೀಡಿದ ಅಧ್ಯಕ್ಷರು ಅಭಿನಂದಿಸಿ ಹಸ್ತಲಾಘವ ನೀಡಿದರು. ಬಹುಮಾನ ಕೈಗೆ ತೆಗೆದುಕೊಂಡ ಮೇಲೆ, ಸಿಕ್ಕಿದ ಅವಕಾಶ ಬಿಡಬಾರದೆಂದು ಕುವೆಂಪು ಅವರ ಬಳಿ ತೆರಳಿ ಕೈನೀಡಿದೆ. ಅವರು ಮುಗುಳ್ನಕ್ಕು ಕೈ ಕುಲುಕಿದರು. ವೇದಿಕೆಯಲ್ಲಿ ಆಸೀನರಾಗಿದ್ದ ಮೈಸೂರು ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಶಾಂಭವಾನಂದರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಸಾರ್ಥಕ ಮನೋಭಾವದಿಂದ ವೇದಿಕೆ ಇಳಿದು ಬಂದೆ.

ತೇಗದ ಮರದ ಕಟ್ಟುಹಾಕಿದ ವಿವೇಕಾನಂದರ ಬೃಹತ್ ಫೋಟೊ, ಬಹುಮಾನದ ಸರ್ಟಿಫಿಕೇಟ್ ಇವುಗಳು ಬಹುಕಾಲ ನಮ್ಮ ಅಡೇಖಂಡಿ ಮನೆಯ ಗೋಡೆಯಲ್ಲಿದ್ದವು. ವಿವೇಕಾನಂದರ ಕೃತಿಶ್ರೇಣಿಯ ಪುಸ್ತಕಗಳು ಬೀರು ತುಂಬಿದ್ದವು. ಈಗ ಫೋಟೋ ಇಲ್ಲ; ಪುಸ್ತಕ ಇಲ್ಲ; ಅಷ್ಟೇಕೆ – ಅಡೇಖಂಡಿ ಮನೆಯೂ ಇಲ್ಲ.

ಅಂದಹಾಗೆ ಅಂದಿನ ವಿವೇಕಾನಂದ ಜನ್ಮಶತಾಬ್ದಿ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದವರು, ಬಹುಮಾನದ ಸರ್ಟಿಫಿಕೇಟಿಗೆ ಸಹಿ ಹಾಕಿದವರು, ಮುಂದೆ ತಮ್ಮ ಎಂಬತ್ತೆರಡನೇ ವಯಸ್ಸಿನಲ್ಲಿ ಭಾರತದ ಪ್ರಧಾನಿ ಪಟ್ಟಕ್ಕೇರಿದ ಮೊರಾರ್ಜಿ ದೇಸಾಯಿಯವರು.

ಇದಕ್ಕೆಲ್ಲ ಮೂಲ ಪ್ರೇರಣೆ ನೀಡಿದ ಕಾಗದದ ಚೂರಿಗೆ ಕಾರಣರಾದ ಹೊಸಳ್ಳಿ ತಿಮ್ಮಪ್ಪ ಅವರು ಈಗ ಇಲ್ಲ. ಆದರೆ ಅವರನ್ನು ಮರೆಯಲು ಸಾಧ್ಯವೆ? *(ಸಮಾಪ್ತಿ)* ✱